

# ಗುರುನಂದನ್ ಈಗ ಕಾಮಿಡಿಯನ್

‘ಫಸ್ಟ್ ರ್‍ಯಾಂಕ್ ರಾಜು’ ಖ್ಯಾತಿಯ ನಟ ಗುರುನಂದನ್ ಇದೀಗ ಸ್ಟ್ಯಾಂಡ್ ಅಪ್ ಕಾಮಿಡಿಯನ್ ಪಾತ್ರದಲ್ಲಿ ತೆರೆ ಮೇಲೆ ಬರಲಿದ್ದಾರೆ.

2019ರಲ್ಲಿ ‘ಮಿಸ್ಸಿಂಗ್ ಬಾಯ್’ ನಂತರ ಅವರ ಯಾವುದೇ ಸಿನಿಮಾಗಳು ಬಂದಿರಲಿಲ್ಲ. ಈ ಅವಧಿಯಲ್ಲಿ ಅವರು ಮೂರು ಪ್ರಾಜೆಕ್ಟ್‌ಗಳನ್ನು ಪೂರ್ಣಗೊಳಿಸಿದ್ದು, ‘ರಾಜು ಜೇಮ್ಸ್ ಬಾಂಡ್’, ‘ಫಾರೆಸ್ಟ್’, ‘ಹ್ಯಾಪಿ ಎಂಡಿಂಗ್’ ಸಿನಿಮಾಗಳು ಬಿಡುಗಡೆಗೆ ಸಿದ್ಧಗೊಂಡಿವೆ. ಇದೀಗ ಕಾಮಿಡಿಯನ್ ಆಗಿ ಹೊಸ ಸಿನಿಮಾದಲ್ಲಿ ತೊಡಗಿಕೊಂಡಿದ್ದಾರೆ.

ಗುರುನಂದನ್, ನಟನೆಯ ಜೊತೆಗೆ ಮಂಡಿಮನೆ ಟಾಕೀಸ್ ಬ್ಯಾನರ್ ಅಡಿಯಲ್ಲಿ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಈ ಕಾಮಿಡಿ ಡ್ರಾಮಾಗಾಗಿ ಹಲವು ಸ್ಟ್ಯಾಂಡ್ ಅಪ್ ಕಾಮಿಡಿಯನ್‌ಗಳಿಂದ, ಅದರಲ್ಲೂ ಉತ್ತರ ಕರ್ನಾಟಕದ ಹಾಸ್ಯಗಾರರಿಂದ ಸ್ಫೂರ್ತಿ ಪಡೆದಿರುವುದಾಗಿ ಗುರುನಂದನ್ ಹೇಳಿಕೊಂಡಿದ್ದಾರೆ.

ಚಿತ್ರಕ್ಕೆ ‘ಹರಿಕಥೆ ಅಲ್ಲ ಗಿರಿಕಥೆ’ ಖ್ಯಾತಿಯ ತಪಸ್ವಿನಿ ಪೂಣಚ್ಚ ನಾಯಕಿಯಾಗಿದ್ದಾರೆ.

# ಮಂಸೋರೆ ‘ದೂರ ತೀರ ಯಾನ’



ನಿರ್ದೇಶಕ ಮಂಸೋರೆ ಇದೀಗ ಪ್ರೀತಿಯ ಕಥೆ ಹೇಳಲು ಸಜ್ಜಾಗಿದ್ದಾರೆ. ‘19.20.21’ ಸಿನಿಮಾ ಬಿಡುಗಡೆಯಾಗಿ ವರ್ಷದ ನಂತರ ಹೊಸ ಪ್ರಾಜೆಕ್ಟ್ ಕೈಗೆತ್ತಿಕೊಂಡಿದ್ದು, ಕಥೆಯೂ ಹೊಸ ಧಾಟಿಯಲ್ಲಿರುವುದಾಗಿ ಹೇಳಿದ್ದಾರೆ. ‘ದೂರ ತೀರ ಯಾನ’ ಎಂಬ ಪ್ರೇಮಕಥೆಯೊಂದನ್ನು ಪ್ರೇಕ್ಷಕರಿಗೆ ನೀಡಲಿರುವುದಾಗಿ ತಿಳಿಸಿದ್ದಾರೆ.

ತಮ್ಮ ಹೊಸ ಪ್ರಾಜೆಕ್ಟ್ ಬಗ್ಗೆ ಮಾತನಾಡಿರುವ ಅವರು, ‘ನಾನು ಇಲ್ಲಿಯವರೆಗೆ ಮಾಡಿರುವ ಸಿನಿಮಾಗಳ ಬಗ್ಗೆ ನನಗೆ ತೃಪ್ತಿಯಿದೆ. ಕಥೆ ಹೇಳುವ ರೀತಿಯಲ್ಲಿ ಹೊಸತನ ರೂಢಿಸಿಕೊಳ್ಳಬೇಕು ಎಂದು ಒಂದು ವರ್ಷ ಅವಧಿ ತೆಗೆದುಕೊಂಡೆ. ಇದು ನನ್ನ ಹೊಸ ಪಯಣ ಎನ್ನಬಹುದು. ಹೆಚ್ಚಿನ ಸಂಖ್ಯೆಯಲ್ಲಿ ಪ್ರೇಕ್ಷಕರನ್ನು ತಲುಪೋಣ ಎಂದು ಈ ಕಥೆ ಆರಿಸಿಕೊಂಡಿದ್ದೇನೆ. ಇದೊಂದು ನ್ಯೂಜನರೇಷನ್ ಪ್ರೇಮಕಥೆ. ಸಿನಿಮಾದಲ್ಲಿ ಮಂಸೋರೆ ಸಿಗ್ನೇಚರ್ ಇದ್ದರೂ ಹೇಳುವ ರೀತಿ ಹೊಸತಾಗಿದೆ. ನನ್ನ ಹಿಂದಿನ ನಾಲ್ಕು ಸಿನಿಮಾಗಳಿಗಿಂತ ಹೊಸ ರೀತಿ ಸಿನಿಮಾ ಇದು’ ಎಂದಿದ್ದಾರೆ.

‘ಇದೊಂದು ಟ್ರಾವೆಲಿಂಗ್ ಸ್ಟೋರಿ. ಇದನ್ನು ಮ್ಯೂಸಿಕಲ್ ಜರ್ನಿ ಸಿನಿಮಾ ಎನ್ನಲೂಬಹುದು. ವೃತ್ತಿ–ಪ್ರವೃತ್ತಿ ನಡುವೆ ಪ್ರೀತಿಯ ಹುಡುಕಾಟವಿದು’ ಎಂದು ವಿವರಿಸಿದ್ದಾರೆ. ಡಿ.ಕ್ರಿಯೇಷನ್ಸ್‌ನ ದೇವರಾಜ್ ಆರ್. ನಿರ್ಮಾಣ ಮಾಡುತ್ತಿರುವ ಈ ಸಿನಿಮಾದಲ್ಲಿ ವಿಜಯ್ ಕೃಷ್ಣ ನಾಯಕರಾಗಿ ಹಾಗೂ ಪ್ರಿಯಾಂಕ ಕುಮಾರ್ ನಾಯಕಿಯಾಗಿ ನಟಿಸುತ್ತಿದ್ದಾರೆ. ಬಕೇಶ್ ಹಾಗೂ ಕಾರ್ತಿಕ್ ಸಂಗೀತ ಸಂಯೋಜಿಸುತ್ತಿರುವ ಆರು ಹಾಡುಗಳು ಸಿನಿಮಾದಲ್ಲಿರಲಿವೆ.

# ಮಾಳವಿಕಾ ಕನ್ನಡ ಕಲಿಕೆ



‘ಕೃಷ್ಣಂ ಪ್ರಣಯ ಸಖಿ’ ಸಿನಿಮಾ ಮೂಲಕ ಚಂದನವನಕ್ಕೆ ಕಾಲಿಟ್ಟಿರುವ ಮಲೆಯಾಳಂ ಬೆಡಗಿ ಮಾಳವಿಕಾ ನಯ್ಯರ್, ತಮ್ಮ ಮೊದಲ ಕನ್ನಡ ಸಿನಿಮಾ ಹಾಗೂ ಕನ್ನಡ ಭಾಷೆಯ ಬಗ್ಗೆ ಅಭಿಮಾನದ ಮಾತುಗಳನ್ನು ಆಡಿದ್ದಾರೆ.

ಗೋಲ್ಡನ್ ಸ್ಟಾರ್ ಗಣೇಶ್ ಅಭಿನಯದ ‘ಕೃಷ್ಣಂ ಪ್ರಣಯ ಸಖಿ’ ಸಿನಿಮಾ ಈಚೆಗೆ ಬಿಡುಗಡೆಯಾಗಿದ್ದು, ಈ ಸಿನಿಮಾ ಹಲವು ಕಾರಣಗಳಿಗೆ ತಮಗೆ ವಿಶೇಷವಾಗಿರುವುದಾಗಿ ಮಾಳವಿಕಾ ಹೇಳಿದ್ದಾರೆ.

‘ನನ್ನ ಅಜ್ಜಿ ಕನ್ನಡ, ತಮಿಳು, ಮಲೆಯಾಳಂ ಭಾಷೆಗಳನ್ನು ಸ್ವಲ್ಪ ಸ್ವಲ್ಪ ಮಾತನಾಡುತ್ತಾರೆ. ಆದರೆ ನನಗೆ ಕನ್ನಡ ಕಲಿಯುವ ಅವಕಾಶವೇ ಸಿಕ್ಕಿರಲಿಲ್ಲ. ಈ ಸಿನಿಮಾ ಮೂಲಕ ನಾನು ಕನ್ನಡ ಮಾತನಾಡಲು ಹಾಗೂ ಅರ್ಥ ಮಾಡಿಕೊಳ್ಳಲು ಕಲಿತಿದ್ದೇನೆ. ಜೊತೆಗೆ ಇದು ನನ್ನ 25ನೇ ಸಿನಿಮಾ ಆಗಿರುವುದರಿಂದ ನನಗೆ ಬಹಳ ಸ್ಪೆಷಲ್’ ಎಂದಿದ್ದಾರೆ.

13ನೇ ವಯಸ್ಸಿಗೆ ನಟನೆಗೆ ಇಳಿದ ಮಾಳವಿಕಾ, ತಮಿಳು, ತೆಲುಗು, ಮಲೆಯಾಳಂ ಭಾಷೆಯ ಹಲವು ಸಿನಿಮಾಗಳಿಗೆ ಬಣ್ಣ ಹಚ್ಚಿದ್ದಾರೆ. ‘ಉಸ್ತಾದ್ ಹೋಟೆಲ್’, ‘ಕರ್ಮಯೋಧ’ ಸಿನಿಮಾಗಳಲ್ಲಿ ಚಿಕ್ಕಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡ ಅವರಿಗೆ ಜನಪ್ರಿಯತೆ ತಂದುಕೊಟ್ಟದ್ದು ‘ಬ್ಲ್ಯಾಕ್ ಬಟರ್‌ಫ್ಲೈ’ ಸಿನಿಮಾ.

ಮಲೆಯಾಳಂ ಭಾಷೆಯಿಂದ ಗುರುತಿಸಿಕೊಂಡಿದ್ದರೂ ತೆಲುಗು ಸಿನಿಮಾರಂಗದಲ್ಲಿ ತಮ್ಮದೇ ಅಭಿಮಾನಿ ಬಳಗ ಹೊಂದಿದ್ದಾರೆ ಮಾಳವಿಕಾ. ಅವರು ನಟಿಸಿರುವ ಹದಿನಾರು ಸಿನಿಮಾಗಳ ಪೈಕಿ ಹತ್ತು ಸಿನಿಮಾ ತೆಲುಗು ಭಾಷೆಯದ್ದೇ ಆಗಿವೆ. ಇದೀಗ ಕನ್ನಡ ಸಿನಿಮಾರಂಗದಲ್ಲೂ ಅವರು ಸೈ ಎನಿಸಿಕೊಂಡಿದ್ದಾರೆ.